# ಕಲಾತ್ಮಕ ಮುದ್ರಣ ಯಂತ್ರ

ಎರಕ ಹೊಯ್ದ ಕಬ್ಬಿಣದಿಂದ ತಯಾರಿಸಲ್ಪಟ್ಟ ಈ ಕಲಾತ್ಮಕ ಮುದ್ರಣ ಯಂತ್ರ ನ್ಯಾಷನಲ್ ಮ್ಯೂಸಿಯಂ ಆಫ್ ಸ್ಕಾಟ್ಲೆಂಡ್‌ನ ಗ್ರಾಂಡ್ ಗ್ಯಾಲರಿಯಲ್ಲಿ ಪ್ರದರ್ಶಿಸಲ್ಪಟ್ಟಿದೆ. ದಿನ ಪತ್ರಿಕೆಗಳನ್ನು ಮುದ್ರಿಸಲು 1812ರಲ್ಲಿ ಜಾರ್ಜ್ ಕ್ಲೈಮರ್ ವಿನ್ಯಾಸಗೊಳಿಸಿದ ಕೊಲಂಬಿಯ ಹೆಸರಿನ ಮುದ್ರಣ ಯಂತ್ರದಲ್ಲಿ ಗಮನ ಸೆಳೆಯುವುದು ಮತ್ಸ್ಯ ಹಾಗೂ ಅಮೆರಿಕನ್ ಹದ್ದಿನ ಕಲಾಕೃತಿಗಳು. ಇಲ್ಲಿ ಪ್ರದರ್ಶಿಸಲಾಗಿರುವ ಮಾನವ ಚಾಲಿತ ಯಂತ್ರ ನಿರ್ಮಾಣಗೊಂಡಿದ್ದು 1865ರಲ್ಲಿ. ಡಿ ಅಂಡ್ ಜೆ ಗ್ರೇಗ್ ಸಂಸ್ಥೆ ನಿರ್ಮಿಸಿದ ಈ ಯಂತ್ರವನ್ನು 1964ರ ತನಕ ಸಂಗ್ರಹಾಲಯದ ಮುದ್ರಣ ಕಾರ್ಯಕ್ಕಾಗಿ ಬಳಸಲಾಗುತ್ತಿತ್ತು.

■ ಮಂಜುನಾಥ ಡಿ.ಎಸ್., ಬೆಂಗಳೂರು





# ಸುಣ್ಣದ ಡಬ್ಬಿ

ಮಲೆನಾಡಿನ ಮನೆಗಳಲ್ಲಿ ತಾಂಬೂಲದ ಮರಿಗೆ ಇರುವುದನ್ನು ನೋಡಿರಬಹುದು. ಈ ಮರಿಗೆಯಲ್ಲಿ ಸುಣ್ಣ ಹಾಕಿಡಲು ಪುಟ್ಟ ಡಬ್ಬಿ ಇಟ್ಟಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಸುಧಾರಿತ ಡಬ್ಬಿ ಈ ಮರಿಗೆಯಲ್ಲಿ ಠಿಕಾಣಿ ಹೂಡಿದೆ. ಹಿಂದೆ ಉಪಯೋಗಿಸುತ್ತಿದ್ದ ಸುಣ್ಣದ ಡಬ್ಬಿಯನ್ನು ನೋಡಿದ್ದೀರಾ?

ಈ ಚಿತ್ರದಲ್ಲಿ ಇರುವ ಸುಣ್ಣದ ಡಬ್ಬಿಯನ್ನೇ ಸೂಕ್ಷ್ಮವಾಗಿ ನೋಡಿ. ಇದನ್ನು ಹಿತ್ತಾಳೆಯಿಂದ ಸಿದ್ಧಪಡಿಸಲಾಗಿದೆ. ಹೊರ ಭಾಗದಿಂದ ನೋಡಿದರೆ, ಚಿಕ್ಕ ಕ್ರಿಕೆಟ್ ಬಾಲ್‌ನಂತೆ ಕಾಣುತ್ತದೆ. ಅದರ ಮುಚ್ಚಳ ತೆಗೆದರೆ ಪುಟ್ಟ ರಂಧ್ರ ತೋರುತ್ತದೆ. ಈ ರಂಧ್ರದ ಮೂಲಕವೇ ಅಜ್ಜಂದಿರು ಸುಣ್ಣವನ್ನು ತುಂಬಿಕೊಳ್ಳುತ್ತಿದ್ದರು. ಈ ಸುಣ್ಣದ ಡಬ್ಬಿಯಲ್ಲಿ ತುಂಬಿದ ಸುಣ್ಣ ಐದಾರು ದಿನಗಳವರೆಗೂ ಒಣಗುವುದಿಲ್ಲ. ತುಂಬುವಾಗ ಯಾವ ಹದದಲ್ಲಿ ಸುಣ್ಣ ಇರುತ್ತದೆಯೋ ಅದೇ ತೇವಾಂಶವನ್ನು ಇಟ್ಟುಕೊಳ್ಳುವುದೇ ಈ ಡಬ್ಬಿಯ ವಿಶೇಷ. ಈ ಹಿತ್ತಾಳೆಯ ಸುಣ್ಣದ ಡಬ್ಬಿಯ ಬಳಕೆ ಈಗ ವಿರಳ. ಆದರೂ, ಶಿರಸಿ ತಾಲ್ಲೂಕಿನ ಹುಳಗೋಳ ಸಮೀಪದ ಹಕ್ಕಿಮನೆಯ ಆರ್. ಎಂ. ಹೆಗಡೆ ಮನೆಯಲ್ಲಿ ಚಿತ್ರದಲ್ಲಿ ಕಾಣುತ್ತಿರುವ ಸುಣ್ಣದ ಡಬ್ಬಿಯನ್ನು ಪ್ರತ್ಯಕ್ಷವಾಗಿಯೇ ನೋಡಬಹುದು.

■ ಗಣಪತಿ ಹಾಸ್ಪುರ, ಯಲ್ಲಾಪುರ

# ಶಾಲಾ ಆವರಣ

ಡಾಲ್‌ಹೌಸಿ, ಹಿಮಾಲಯದ ದೌಲಾ ಧಾರ್ ಪರ್ವತ ಶ್ರೇಣಿಯಲ್ಲಿನ ಆಕರ್ಷಕ ಗಿರಿಧಾಮಗಳಲ್ಲೊಂದು. ಸಮುದ್ರ ಮಟ್ಟದಿಂದ 7000 ಅಡಿ ಎತ್ತರದಲ್ಲಿರುವ ಈ ಪರಿಸರದಲ್ಲಿ ನಾಲ್ಕು ದಶಕದ ಹಿಂದೆ ಡಾಲ್‌ಹೌಸಿ ಪಬ್ಲಿಕ್ ಸ್ಕೂಲ್ ಸ್ಥಾಪನೆಗೊಂಡಿದ್ದು ಇಂದು ಒಂದು ಸಣ್ಣ ಸ್ವಯಂಪೂರ್ಣವಾದ ಶಾಲಾ ಸಂಕೀರ್ಣವಾಗಿ ಬೆಳೆದಿದೆ. ಪ್ರಶಾಂತ ವಾತಾವರಣ ವಿದ್ಯಾರ್ಥಿ ಏಳಿಗೆಗೆ ಸಹಕರಿಸುತ್ತದೆ. ಅತ್ಯುತ್ತಮ ಕಟ್ಟಡ, ಉತ್ತಮ ಬೋಧನೆ, ಶುದ್ಧ ಪರಿಸರ, ಉತ್ತಮ ವಸತಿ ಸೌಕರ್ಯ ಇದರ ಹೆಗ್ಗಳಿಕೆ.

ಇಲ್ಲಿ ಎಲ್‌ಕೆಜಿಯಿಂದ ಹನ್ನೆರಡನೇ ತರಗತಿವರೆಗೆ ಇದೆ. ಇಲ್ಲಿನ ಬಹುತೇಕ ಶಿಕ್ಷಕವೃಂದ ಕ್ಯಾಂಪಸ್‌ನಲ್ಲೇ ವಾಸಿಸುತ್ತಾರೆ. ಪ್ರಪಂಚದ ನಾನಾ ಭಾಗದಿಂದ ವಿದ್ಯಾರ್ಥಿಗಳು ಬರುತ್ತಾರೆ. ಇಲ್ಲಿ ಸಾಂಸ್ಕೃತಿಕ ವೈವಿಧ್ಯತೆ ವಾತಾವರಣ ನಿರ್ಮಾಣವಾಗಿದೆ.

■ - ಎಸ್.ಪ್ರಭಾವತಿ, ಬೆಂಗಳೂರು

